सत्यमेव जयते

ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

5ನೇ ಏಪ್ರಿಲ್ 2017

**ಶ್ರೀ ಸಿದ್ದರಾಮಯ್ಯ ರವರೇ,**

**ವಿಷಯ:** ಬೆಳ್ಳಂದೂರು ಪ್ರಿಸ್ಕೂಲ್ ಪ್ರಕರಣವನ್ನು ಯಾವುದೇ ರಾಜಕೀಯ ಮಧ್ಯಪ್ರವೇಶವಿಲ್ಲದೆ ತ್ವರಿತ, ನಿಷ್ಪಕ್ಷಪಾತ, ಪಾರದರ್ಶಕ ಮತ್ತು ಸಮಂಜಸ ತನಿಖೆ ನಡೆಸಲು ಮತ್ತು ಅಂತಹ ಹೀನ ಅಪರಾಧಗಳು ಮರುಕಳಿಸದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಅತ್ಯಂತ ತುರ್ತಿನ ಕ್ರಮದ ಬಗ್ಗೆ.

ನೀವು ಮತ್ತು ನಿಮ್ಮ ಸರ್ಕಾರಕ್ಕೆ ಗೊತ್ತಿರುವಂತೆ ನಿಮ್ಮ ಸರ್ಕಾರವನ್ನು ಮತ್ತು ಅದರ ವಿವಿಧ ಸಂಸ್ಥೆಗಳನ್ನು ಮಕ್ಕಳ ಲೈಂಗಿಕ ದುರ್ಬಳಕೆ ಕುರಿತು ಎಚ್ಚೆತ್ತುಕೊಳ್ಳಲು ಮತ್ತು ಬೆಂಗಳೂರನ್ನು ಮಕ್ಕಳ ಸುರಕ್ಷತೆಯ ನಗರವಾಗಿ ಸೃಷ್ಟಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ನಾನು ಒತ್ತಾಯಿಸುತ್ತಿದ್ದೇನೆ.

ನಾನು ಸಾರ್ವಜನಿಕವಾಗಿ ಈ ಕುರಿತು ಮಾತನಾಡುತ್ತಿದ್ದೇನೆ ಮತ್ತು ನಿಮ್ಮ ಸರ್ಕಾರಕ್ಕೆ ಪತ್ರ ಬರೆದು ಕರ್ನಾಟಕದಲ್ಲಿ ಮಕ್ಕಳ ಲೈಂಗಿಕ ದೌರ್ಜನ್ಯದ ಪ್ರಕರಣಗಳ ಬಲಿಪಶುಗಳಿಗೆ ನ್ಯಾಯ ಒದಗಿಸಿಕೊಡಲು ಮತ್ತು ಮಕ್ಕಳ ಲೈಂಗಿಕ ಶೋಷಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಫೆಬ್ರವರಿ 20, 2014ರಿಂದಲೂ ಆಗ್ರಹಿಸುತ್ತಿದ್ದೇನೆ. ನಂತರ ವಿವಿಧ ಸಂದರ್ಭಗಳಲ್ಲೀಯೂ ತಮಗೆ ಈ ಕುರಿತು ಪತ್ರ ಬರೆದಿದ್ದೇನೆ.

ಹೀಗಿದ್ದರೂ ನೀವು ಮತ್ತು ನಿಮ್ಮ ಸರ್ಕಾರ ಇತ್ತೀಚಿನವರೆಗೂ ಉದಾಸೀನದಿಂದ ಇದ್ದು ಮತ್ತು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ ಮತ್ತು ಇದು ಅಂತಹ ಹೀನ ಅಪರಾಧಗಳನ್ನು ಮಾಡುವವರಿಗೆ ಮತ್ತೆ ಮತ್ತೆ ಅಪರಾಧ ನಡೆಸಲು ಉತ್ತೇಜನಕಾರಿಯಾಯಿತು.

ಮಾಧ್ಯಮಗಳ ಗಮನ ಸೆಳೆದು, ಪೋಷಕರು ಪ್ರತಿಭಟನೆ ನಡೆಸಿ ಮತ್ತು ಬೆಂಗಳೂರಿನ ಪ್ರಿ-ಸ್ಕೂಲ್‌ನಲ್ಲಿ ಸಹಾಯ ಸಿಬ್ಬಂದಿಯಿಂದ ದೌರ್ಜನ್ಯಕ್ಕೆ ಒಳಗಾದ 7 ಮಕ್ಕಳ ಹಕ್ಕುಗಳನ್ನು ರಕ್ಷಿಸಲು ನನ್ನ ಪುನರಾವರ್ತಿತ ಕೋರಿಕೆಗಳ ನಂತರ ಫೆಬ್ರವರಿ 2017ರವರೆಗೂ ನೀವು ಪ್ರತಿಕ್ರಿಯೆ ನೀಡಿರಲಿಲ್ಲ.

ನಿಮ್ಮ ಸರ್ಕಾರದ ಈ ನಿಷ್ಕ್ರಿಯತೆ ಮತ್ತು ನಿರಾಸಕ್ತಿ ನೇರವಾಗಿ ಫೆಬ್ರವರಿ 2017ರ ಘಟನೆಗಳಿಗೆ ಕಾರಣವಾಯಿತು. ಈ ಘಟನೆಯಲ್ಲಿ ಅಪರಾಧಿಗೆ ಬೆಳ್ಳಂದೂರಿನ ಪ್ರಿಸ್ಕೂಲ್‌ನಲ್ಲಿ ಹಲವು ಮಕ್ಕಳ ಮೇಲೆ ದೌರ್ಜನ್ಯ ಎಸಗಲು ಯಾವುದೇ ಭಯವಿಲ್ಲದಂತೆ ಮಾಡಿತು, ಅಲ್ಲದೆ ಸ್ಕೂಲ್‌ನ ಆಡಳಿತ ಮಂಡಳಿಯೂ ಈ ಹೀನ ಅಪರಾಧ ಕುರಿತು ದೂರು ನೀಡಲು ನಿರಾಕರಿಸುವಂತೆ ಮಾಡಿದ್ದರಿಂದ ಪೋಷಕರೇ ದೂರು ನೀಡಬೇಕಾಯಿತು.

ದೂರು ದಾಖಲಾಗಿದ್ದರೂ ಇಂದು ಕೂಡಾ ಪೋಷಕರು ಹೇಳುತ್ತಿರುವುದೇನೆಂದರೆ, ಮಕ್ಕಳ ಮೇಲೆ ಗಂಭೀರ ಲೈಂಗಿಕ ದೌರ್ಜನ್ಯ ನಡೆದಿದ್ದರೂ ಆರೋಪಿಯ ವಿರುದ್ಧ ದಾಖಲಾದ ಎಫ್‌ಐಆರ್‌ಗಳು ಪೋಕ್ಸೊ ಕಾಯ್ದೆಯ ಅನ್ವಯ ಆಪಾದನೆಗಳಿಲ್ಲ, ಅಂದರೆ ಗಂಭೀರ ಲೈಂಗಿಕ ಹಲ್ಲೆಯ ಅನುಚ್ಛೇದ 5 ಮತ್ತು 6ರ ಅನ್ವಯ ಆರೋಪಗಳನ್ನು ದಾಖಲಿಸಲಾಗಿಲ್ಲ.

11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

ಪೋಷಕರ ದೂರುಗಳ ನಂತರವೂ ಪ್ರಾಂಶುಪಾಲರು ಮತ್ತಿತರೆ ಶಾಲಾ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ಆರೋಪಿಯನ್ನು ಪೋಕ್ಸೋ ಕಾಯ್ದೆಯ ಅನ್ವಯ ಅಪರಾಧ ನಡೆಸಿದ್ದಾನೆ ಎಂದು ವರದಿ ಮಾಡಲು ನಿರಾಕರಿಸಿದ್ದಾರೆ. ಪ್ರಾಂಶುಪಾಲರು ಮತ್ತಿತರೆ ಶಾಲಾ ಸಿಬ್ಬಂದಿಯ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳು ಕೂಡಾ ಪೊಕ್ಸೊ ಕಾಯ್ದೆಯ ಅನ್ವಯ ಸೂಕ್ತವಾದ ಆರೋಪಗಳನ್ನು ಮಾಡಿಲ್ಲ. ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾಗಿ ಪ್ರಾಂಶುಪಾಲರು ಅನುಚ್ಛೇದ 21(2)ರ ಅನ್ವಯ ಅಪರಾಧವನ್ನು ವರದಿ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ.

ಈ ಸರ್ಕಾರದ ನಿಷ್ಕ್ರಿಯತೆ ಮತ್ತು ನಿರಾಸಕ್ತಿಯಿಂದ ನಿಮ್ಮ ಪಕ್ಷದ ಶಾಸಕರು ಮುಕ್ತವಾಗಿ ಈ ವಿಷಯದ ತನಿಖೆ ಕುರಿತಂತೆ ಪೂರ್ವಾಗ್ರಹಪೀಡಿತ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಮಾರ್ಚ್ 17, 2017ರಂದು ನಿಮ್ಮ ಪಕ್ಷದ ವಿಧಾನ ಪರಿಷತ್ ಸದಸ್ಯರು ವಿಧಾನ ಪರಿಷತ್‌ನಲ್ಲಿಯೇ ಪೋಷಕರು ಪ್ರಿಸ್ಕೂಲ್‌ನ ಪ್ರತಿಸ್ಪರ್ಧಿಗಳೊಂದಿಗೆ ಸೇರಿ ಸುಳ್ಳು ದೂರು ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ವರದಿಗಳ ಪ್ರಕಾರ(ಲಗತ್ತಿಸಲಾಗಿದೆ) ಈ ಎಂಎಲ್‌ಸಿ ತನಿಖೆಯ ವರದಿಗಳು ಈ ದೌರ್ಜನ್ಯ ನಡೆದಿಲ್ಲ ಎಂದು ಬಂದಿವೆ ಎನ್ನುತ್ತಾರೆ. ಅದು ನಿಜವಾಗಿದ್ದರೆ ತನಿಖೆಯ ಫಲಿತಾಂಶಗಳನ್ನು ಕಾನೂನು ಮೀರಿ ಅನಧಿಕೃತ ವ್ಯಕ್ತಿಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎನ್ನುವುದನ್ನು ಇದು ಸೂಚಿಸುತ್ತದೆ.

ಈಗ ನೀವು ಬಹಳ ತಡವಾಗಿ ಈ ವಿಷಯದ ಕುರಿತು ಎಚ್ಚರಗೊಂಡಿರುವುದು ಕಳೆದ ನಾಲ್ಕು ವರ್ಷಗಳಿಂದ ನಿಮ್ಮ ಸರ್ಕಾರ ನಿರಾಸಕ್ತಿ ಮತ್ತು ಅಸಂವೇದನಾಶೀಲತೆಯ ಅತ್ಯಂತ ನಾಚಿಕೆಗೇಡಿನ ನಡೆಯಾಗಿದ್ದು, ಈ ಹೀನ ಕೃತ್ಯದ ಹಿನ್ನೆಲೆಯಲ್ಲಿ ಮತ್ತು ನ್ಯಾಯದ ಹಿತಾಸಕ್ತಿ ಮೂಲಕ ನಾನು ಈ ಕೆಳಕಂಡ ಕ್ರಮ ಕೈಗೊಳ್ಳಲು ಕೋರುತ್ತೇನೆ:

1. ಆರೋಪಿಗಳ ಮೇಲಿನ ಪೋಲೀಸರ ಆಪಾದನೆಗಳು ಪ್ರತಿ ಬಲಿಪಶುವಿಗೂ ಸಂಬಂಧಿಸಿದಂತೆ ಪೊಕ್ಸೊ ಕಾಯ್ದೆಯ ಎಲ್ಲ ಅನ್ವಯಿಸಬಲ್ಲ ನಿಯಮಗಳ ಅನ್ವಯ ಇರಬೇಕು.
2. ಮಕ್ಕಳ ಲೈಂಗಿಕ ದೌರ್ಜನ್ಯವನ್ನು ವರದಿ ಮಾಡಲು ವಿಫಲರಾದ ಪ್ರಾಂಶುಪಾಲ ಮತ್ತು ಆಡಳಿತ ಮಂಡಳಿಯ ಆರೋಪಿಗಳ ಮೇಲೆ ಪೋಲೀಸರ ಆಪಾದನೆಗಳು ಪೊಕ್ಸೊ ಕಾಯ್ದೆಯ ಅನ್ವಯಿಸಬಲ್ಲ ನಿಯಮಗಳ ಅನುಸಾರ ಇರಬೇಕು.
3. ತನಿಖೆಯನ್ನು ಯಾವುದೇ ರಾಜಕೀಯ ಪ್ರಭಾವದಿಂದ ಮುಕ್ತವಾಗಿಸಬೇಕು ಮತ್ತು ತನಿಖೆ ನ್ಯಾಯಬದ್ಧ, ಪಾರದರ್ಶಕ, ಪೂರ್ಣ ಮತ್ತು ಸಮಂಜಸವಾಗಿರುವಂತೆ ನೋಡಿಕೊಳ್ಳಬೇಕು.
4. ತನಿಖೆಯ ಫಲಿತಾಂಶಗಳು ಆರೋಪಿಗಳು ಮತ್ತು ಅವರ ಕುಟುಂಬವರ್ಗದವರಿಗೆ ಹೇಗೆ ದೊರೆಯಿತೆಂದು ವಿಚಾರಣೆ ನಡೆಸಬೇಕು.
5. ತನಿಖೆ ಪೂರ್ಣಗೊಳ್ಳುವುದನ್ನು ದೃಢೀಕರಿಸಬೇಕು ಮತ್ತು ಆರೋಪಿಗಳು, ಪ್ರಾಂಶುಪಾಲರು ಮತ್ತು ಶಾಲೆಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯ ವಿರುದ್ಧ ಆರೋಪಪಟ್ಟಿ ದಾಖಲಾಗಬೇಕು.

ಈ ಮೇಲ್ಕಂಡ ಕ್ರಮಗಳಲ್ಲದೆ ಸರ್ಕಾರ ಮಕ್ಕಳ ವಿರುದ್ಧ ಅಪರಾಧಗಳನ್ನು ಸರ್ಕಾರ ಸಹಿಸುವುದಿಲ್ಲ ಎಂಬ ಸಂದೇಶ ನೀಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬೇಕು.

1. ಸರ್ಕಾರ ಅಥವಾ ಖಾಸಗಿ ಶಾಲೆಯಿರಲಿ ಅಲ್ಲಿ ವಾರ್ಷಿಕ ಸುರಕ್ಷತೆಯ ಆಡಿಟ್ ನಡೆಸಬೇಕು. ಈ ಸೇಫ್ಟಿ ಆಡಿಟ್ ವರದಿಗಳು ಸಾರ್ವಜನಿಕರಿಗೆ ಮತ್ತು ಪೋಷಕರಿಗೆ ದೊರೆಯುವಂತೆ ಇರಬೇಕು.

सत्यमेव जयते

2. ಶಾಲಾ ಆಡಳಿತ ಮಂಡಳಿಗಳು ಶಾಲೆಯ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವಾಗ ಕಠಿಣ ಪರಿಶೀಲನಾ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು.
3. ರಾಜ್ಯ ಕ್ಯಾಬಿನೆಟ್‌ನಲ್ಲಿ ಅನುಮೋದನೆಯಾಗಿರುವ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ಕಡ್ಡಾಯವಾಗ ಜಾರಿಗೊಳಿಸಬೇಕು.
4. ಖಾಸಗಿ ಪ್ಲೇಸ್ಕೂಲ್‌ಗಳಿಗೆ ಎನ್‌ಸಿಪಿಸಿಆರ್ ಸಿದ್ಧಪಡಿಸಿರುವ ನಿಯಂತ್ರಣ ಮಾರ್ಗದರ್ಶಿ ಸೂತ್ರಗಳನ್ನು ಅನುಷ್ಠಾನಗೊಳಿಸಬೇಕು.
5. ಮಕ್ಕಳ ಲೈಂಗಿಕ ಅಪರಾಧ ಮಾಡುವವರ ನೋಂದಣಿ ರೂಪಿಸಿ ಅದನ್ನು ಕೇಂದ್ರ ಸರ್ಕಾರದ ಡೇಟಾಬೇಸ್‌ಗೆ ಸೇರ್ಪಡೆ ಮಾಡಬೇಕು.
6. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಮತ್ತು ಫಾಸ್ಟ್ ಟ್ರಾಕ್ ಪೋಕ್ಸೊ ನ್ಯಾಯಾಲಯಗಳ ಮೂಲಕ ಫಾಸ್ಟ್ ಟ್ರಾಕ್ ಶಿಕ್ಷೆ ಸಾಧ್ಯವಾಗಿಸಬೇಕು.

ಸರ್ಕಾರ ಮುಖ್ಯವಾಗಿ ಪೋಲೀಸ್ ಇಲಾಖೆ ಮತ್ತು ಮಕ್ಕಳ ವಿರುದ್ಧ ಅಪರಾಧಗಳನ್ನು ಝೀರೋ-ಟಾಲರೆನ್ಸ್ ವಿಧಾನ ಅಳವಡಿಸಿಕೊಳ್ಳಬೇಕು. ಇದು ಸರ್ಕಾರದ ನೈತಿಕ ಜವಾಬ್ದಾರಿಯಾಗಿದೆ ಮತ್ತು ಅದರ ಮುಖ್ಯಸ್ಥರಾಗಿ ಅಂತಹ ಹೀನಕೃತ್ಯಗಳು ಮತ್ತೆ ನಡೆಯದಂತೆ ಕಾನೂನುಗಳನ್ನು ಕಠಿಣವಾಗಿ ಅನುಷ್ಠಾನಗೊಳಿಸಬೇಕು. ನೀವು ಮತ್ತು ನಿಮ್ಮ ಸರ್ಕಾರ ನಮ್ಮ ಮಕ್ಕಳ ಸುರಕ್ಷತೆಯನ್ನು ನೀಡುವುದು ಜವಾಬ್ದಾರಿಯಾಗಿದೆ ಮತ್ತು ಈ ರಾಜ್ಯದ ಜನರು ನಮ್ಮ ಮಕ್ಕಳ ಸುರಕ್ಷತೆಯ ಕುರಿತು ಅಗತ್ಯ ಕ್ರಮಗಳನ್ನು ಕೈಗೊಳ್ಳದಿದ್ದರೆ ನಿಮ್ಮನ್ನು ಹೊಣೆಗಾರರನ್ನಾಗಿಸುತ್ತಾರೆ ಎಂದು ಒತ್ತಿ ಹೇಳುತ್ತೇನೆ.

ಕನಿಷ್ಟ ಈಗಲಾದರೂ ಎದ್ದೇಳಿ! ಅಂತಹ ಅಪರಾಧಗಳು ಮರುಕಳಿಸದಿರಲಿ. ದಯವಿಟ್ಟು ಸಲಹೆ ನೀಡಿದ ಕ್ರಮಗಳನ್ನು ಕೈಗೊಳ್ಳಿ ಮತ್ತು ಎಲ್ಲ ಮಕ್ಕಳಿಗೂ ನಮ್ಮ ನಗರವನ್ನು ಸುರಕ್ಷಿತಗೊಳಿಸಿ.

ತಮ್ಮ ವಿಶ್ವಾಸ,

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ಧರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು